X	**ಬಿಜಾಪುರ ಹಾಲು ಒಕ್ಕೂಟ**	
11	ಬಿಜಾಪುರ (ಭೂತನಾಳ್)	20
12	ಬಾಗಲಕೋಟೆ ಡೇರಿ	20
XI	**ದಕ್ಷಿಣ ಕನ್ನಡ ಹಾಲು ಒಕ್ಕೂಟ**	
13	ಮಂಗಳೂರು ಡೇರಿ	100
14	ಮಣಿಪಾಲ್ ಡೇರಿ	60
XII	**ಶಿವಮೊಗ್ಗ ಹಾಲು ಒಕ್ಕೂಟ**	
15	ಶಿವಮೊಗ್ಗ ಡೇರಿ	100
16	ದಾವಣಗೆರೆ ಡೇರಿ	30
XIII	**ರಾಯಚೂರು –ಬಳ್ಳಾರಿ–ಕೊಪ್ಪಳ ಹಾಲು ಒಕ್ಕೂಟ**	
17	ರಾಯಚೂರು ಡೇರಿ	20
18	ಬಳ್ಳಾರಿ ಡೇರಿ	40
XIV	**ಕರ್ನಾಟಕ ಹಾಲು ಮಹಾಮಂಡಳಿ**	
19	ಮಾತೃ ಡೇರಿ	400
20	ಡೆಂಪೋ ಡೇರಿ	120
	ಒಟ್ಟು	**2590**

4675 (5250) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳೀಂದಿಚೆಗೆ, ಕೈಗಾರಿಕೆ ಸ್ಥಾಪನೆಯ ಸಂಬಂಧದಲ್ಲಿ ಎಷ್ಟು ಮಂದಿ ನಿರುದ್ಯೋಗಿ ಯುವಕರು ಯಾವ ಯಾವ ಯೋಜನೆಯಡಿ ಸಾಲ ಸೌಲಭ್ಯ ಪಡೆದಿರುವರು; ವಿವರ ನೀಡುವುದು;

ಆ) ನಿರುದ್ಯೋಗಿ ಯುವಕರು ಕೈಗಾರಿಕೆ ಸ್ಥಾಪನೆ ಮಾಡುವಂತೆ ಉತ್ತೇಜಿಸಲು ಸರ್ಕಾರದ ಮುಂದೆ ಇರುವ ಯೋಜನೆಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಕೈಗಾರಿಕೆ ಸೇವೆ ಮತ್ತು ವ್ಯಾಪಾರ ಘಟಕ ಸ್ಥಾಪಿಸಲು ಅವಕಾಶವಿದ್ದು, ಪ್ರತಿ ಸಾಲಿನಲ್ಲಿ ಅಂದಾಜು ಶೇ.20ರಷ್ಟು ಫಲಾನುಭವಿಗಳು ಕೈಗಾರಿಕೆಗಳಿಗಾಗಿ ಸಾಲ ಸೌಲಭ್ಯ ಪಡೆಯುತ್ತಾರೆ. ಈ ನಿಟ್ಟಿನಲ್ಲಿ ಹಣ ಬಿಡುಗಡೆ ಮಾಡಿರುವ ವಿವರಗಳನ್ನು ಈ ಕೆಳಗೆ ನೀಡಲಾಗಿದೆ ;

ವರ್ಷ	ಫಲಾನುಭವಿಗಳ ಸಂಖ್ಯೆ
2002–03	13621
2003–04	15407
2004–05	9301 (ಮೇ 2005ರ ಅಂತ್ಯದವರೆಗೆ)

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಅಂಚು ಹಣ ಯೋಜನೆಯಡಿ ರಾಜ್ಯದಲ್ಲಿ 2001ನೇ ಜನವರಿಯಿಂದ ಇಲ್ಲಿಯವರೆಗೆ, ಈ ಕೆಳಗಿನಂತೆ ಮಂಜೂರಾದ ಘಟಕಗಳು ಹಾಗೂ ಸೃಷ್ಟಿಯಾದ ಉದ್ಯೋಗಿಗಳ ವಿವರ ನೀಡಿದೆ :

ಮಂಜೂರಾದ ವರ್ಷ	ಘಟಕಗಳು	ಸೃಷ್ಟಿಯಾದ ಉದ್ಯೋಗ
2002–03	365	5600
2003–04	589	7888
2004–05	590	10515

ಕರ್ನಾಟಕ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನೋಂದಾಯಿಸಿದ ಸಣ್ಣ ಕೈಗಾರಿಕೆಗಳು ಬಂಡವಾಳ ಹೂಡಿಕೆ ಹಾಗೂ ಉದ್ಯೋಗಾವಕಾಶಗಳು ಸೃಷ್ಟಿಯಾದ ವಿವರಗಳು ಈ ಕೆಳಗಿನಂತಿವೆ :

ವರ್ಷ	ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ	ಬಂಡವಾಳ ಹೂಡಿಕೆ (ರೂ.ಲಕ್ಷಗಳಲ್ಲಿ)	ಸೃಷ್ಟಿಯಾದ ಉದ್ಯೋಗ
2002–03	12029	40836.00	57371
2003–04	12220	37054.00	56790
2004–05	11238	38542.00	49998

ಆ) ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ರೋಜಗಾರ್ ಯೋಜನೆಯಡಿ ನಿರುದ್ಯೋಗಿ ಯುವಕರು ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ವಲಯಗಳಲ್ಲಿ ಸ್ವಂತ ಉದ್ಯೋಗ ಸ್ಥಾಪಿಸಲು ಅವಕಾಶ ಮಾಡಿ ಕೊಡಲಾಗಿದೆ. ಕೈಗಾರಿಕೆ ಘಟಕಗಳನ್ನು ಸ್ಥಾಪಿಸಲು ಈ ಯೋಜನೆಯಡಿಯಲ್ಲಿ ಬ್ಯಾಂಕುಗಳ ಮೂಲಕ ರೂ.2.00 ಲಕ್ಷಗಳವರೆಗೆ ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಸಾಲ ಮಂಜೂರಾದವರಿಗೆ ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಸಾಲ ಮಂಜೂರಾದವರಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿಯನ್ನು ಕಡ್ಡಾಯವಾಗಿ ನೀಡಲಾಗುವುದು.

ವಿಶ್ವ ಯೋಜನೆಯಡಿ ನಿರುದ್ಯೋಗಿ ಯುವಕರು ಕೈಗಾರಿಕೆ ಸ್ಥಾಪಿಸುವ ನಿಟ್ಟಿನಲ್ಲಿ ರೂಡ್‌ಸೆಟಿ/ರೂಡ್‌ಸೆಟಿ ಮಾದರಿಯ ತರಬೇತಿ ಸಂಸ್ಥೆಗಳು ಉತ್ತಮ ಕೆಲಸ ಕೈಗೊಂಡಿರುವುದನ್ನು ಮನಗಂಡು ಈ ಸಂಸ್ಥೆಗಳ ಸ್ಥಾಪನೆಗೆ ಅನುದಾನ ನೀಡಲಾಗುತ್ತಿದೆ. ಮೂಲಭೂತ ಸೌಕರ್ಯಕ್ಕಾಗಿ ತರಬೇತಿ ಯಂತ್ರೋಪಕರಣಗಳಿಗಾಗಿ ಅನುದಾನ ನೀಡಲಾಗಿದೆ.

ಇದಲ್ಲದೆ, ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗಾಗಿ ಕೂಡ ವಿಶ್ವ ಯೋಜನೆಯಡಿ ಅನುದಾನ ನೀಡಲಾಗಿದೆ. ತೆಂಗಿನನಾರು, ಚರ್ಮ ವಸ್ತುಗಳು, ನೇಯ್ಗೆ, ಕರಕುಶಲ ವಸ್ತುಗಳು ಮುಂತಾದ ವಿವಿಧ ಕಸಬುಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ರೂಡ್‌ಸೆಟಿ ಮಾದರಿಯ ಸಂಸ್ಥೆಗಳ ಮೂಲಕ ಮತ್ತು ನಿಗಮ ಮಂಡಳಿಗಳ ಮೂಲಕವೂ ನೀಡಲಾಗುತ್ತಿದೆ. ಇದರಿಂದ ಉದ್ಯೋಗ ಯುವಕರು ತಾವು ಪಡೆಯುವ ತರಬೇತಿಯನ್ನಾಧರಿಸಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ದೊರೆತಂತಾಗುತ್ತದೆ.

ಅಂಚು ಹಣ ಯೋಜನೆಯು 2005–06ನೇ ಸಾಲಿಗೆ ಮುಂದುವರೆದಿದ್ದು 910 ಘಟಕಗಳ ಸ್ಥಾಪನೆಗೆ ಗುರಿಯನ್ನು ಹೊಂದಲಾಗಿದ್ದು, 18192 ಜನಕ್ಕೆ ಹೊಸದಾಗಿ ಉದ್ಯೋಗವನ್ನು ಸೃಷ್ಟಿಸಲು ಯೋಜಿಸಲಾಗಿದೆ.

4676 (5251) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಯಾವಾಗ, ಯಾರ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು;

ಆ) ಈ ಆಯೋಗವು ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿದ್ದು ಯಾವಾಗ; ಈ ಆಯೋಗದ ಕಾರ್ಯಚಟುವಟಿಕೆಗಳ ಬಗ್ಗೆ ಸದ್ಯದ ಪರಿಸ್ಥಿತಿಯೇನು; ವಿವರ ನೀಡುವುದು;

ಇ) ಈ ಆಯೋಗ ತನ್ನ ವರದಿಯನ್ನು ನೀಡಲು ನಿಗದಿಗೊಳಿಸಿರುವ ಅವಧಿಯೇನು; ವಿವರ ನೀಡುವುದು?